**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1215/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಅಶ್ವಿನ್ ಬಿ.ಎ | ಪ್ರಾಸಾ-4 |
| ತಂದೆಯ ಹೆಸರು | : ಅಶೋಕ್ ಬಿ.ಬಿ | ಚಾಸಾ-1 |
| ವಯಸ್ಸು | : 28 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಸಿವಿಲ್ ಕಂಟ್ರಾಕ್ಟರ್ | ದಿನಾಂಕಃ 01.09.2025 |
| ವಾಸಸ್ಥಳ | : ಬಕ್ಕೀ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ನನಗಿದೆ. ಚಾಸಾ-2 ರವರು ನನ್ನ ತಂದೆ. ಚಾಸಾ-3 ಊರುಮನೆಯವರು.

ದಿ.16.12.2022 ರಂದು ಬೆ.10.00 ರಿಂದ 10.30 ರ ಸಮಯದಲ್ಲಿ ದೈನಂದಿನದಂತೆ ನಾನು ಮತ್ತು ಚಾಸಾ-2 ರವರು ತೋಟಕ್ಕೆ ಹೋಗುವ ಸಮಯದಲ್ಲಿ ಆರೋಪಿಗಳು ನಮ್ಮ ತೋಟದಲ್ಲಿ ಇರುವುದು ಕಂಡುಬಂದಿರುತ್ತದೆ. ಆಗ ನಾನು ಅವರನ್ನು ನಮ್ಮ ತೋಟದಲ್ಲಿ ಏತಕ್ಕಾಗಿ ಕಾಫೀಯನ್ನು ಕೊಯ್ಲು ಮಾಡುತ್ತಿರುತ್ತೀರಿ ಎಂದು ಪ್ರಶ್ನಿಸಲಾಗಿ, ಆಗ ಅವರು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಸದರಿ ಸಮಯದಲ್ಲಿ 2 ನೇ ಆರೋಪಿಯು ನನ್ನ ಬೆನ್ನಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ, 1 ನೇ ಆರೋಪಿಯು ಕತ್ತಿಯ ಹಿಡಿಯಿಂದ ನನ್ನ ಕೈಗೆ ಹೊಡೆದಿರುತ್ತಾರೆ. ನಂತರ ನನ್ನ ಮೊಬೈಲ್ ಫೋನ್ ನ್ನು ಒಡೆದು ಹಾಕಿರುತ್ತಾರೆ. ನಂತರದಲ್ಲಿ ನನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ನಾನು ಮತ್ತು ಚಾಸಾ-2 ರವರು ಆಸ್ಪತ್ರೆಗೆ ಹೋಗಿರುತ್ತೇವೆ, ಚಿಕಿತ್ಸೆ ಪಡೆದ ನಂತರ ಬಣಕಲ್ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

ದೂರನ್ನು ದಾಖಲಿಸಿದ ಕೆಲವು ದಿನಗಳ ನಂತರ ಪೋಲಿಸರು ಸ್ಥಳ ಮಹಜರ್ ಗೆಂದು ಬಂದಿರುತ್ತಾರೆ. ನಾನು ಅವರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ನಂತರ ಚಾಸಾ-3 ಮತ್ತು 4 ರವರ ಸಮಕ್ಷಮದಲ್ಲಿ ಪೋಲಿಸರು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ನನಗೆ ಥಳಿಸಿದ ವಸ್ತುಗಳನ್ನು ತೋರಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ಮತ್ತು 2 ನ್ನು ನೋಡಿ ಆ ದಿನ ಆರೋಪಿಗಳು ಸದರಿ ವಸ್ತುಗಳಿಂದ ಥಳಿಸಿರುತ್ತಾರೆ ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ದಿ.16.12.2022 ರಂದು ನೀಡಿದಂತ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-6 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು

ಎಂ.ಒ.1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಎಂ.ಒ.1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಆ ದಿನ ಹಲ್ಲೆ ಮಾಡಿದ ವ್ಯಕ್ತಿಗಳು ಇವರೇ ಎಂದು ಗುರುತಿಸಿರುತ್ತಾರೆ. ಪೋಲಿಸರು ಜನವರಿ ತಿಂಗಳಿನಲ್ಲಿ ಮಹಜರ್ ಕ್ರಮವನ್ನು ಜರುಗಿಸಲು ಸ್ಥಳಕ್ಕೆ ಬಂದಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಡಿ ವಕೀಲರಿಂದಃ**

ನಾನು ಪದವೀಧರನಾಗಿರುತ್ತೇನೆ. ಆ ದಿನ ನಮ್ಮ ತೋಟದ ಕೆಲಸಕ್ಕೆ ಯಾವುದೇ ಕೆಲಸಗಾರರು ಬಂದಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ 1 ಗಂಟೆಗಳ ಕಾಲ ಇರುತ್ತೇನೆ. ನನಗೆ ಬಣಕಲ್ ಆಸ್ಪತ್ರೆ ಸಮೀಪವಾಗಿರುವುದಿಲ್ಲ. ನಾನು ವೈಧ್ಯಾಧಿಕಾರಿಗಳಿಗೆ ನಂದೀಶ್ ಮತ್ತು ನವೀನ್ ಎಂಬುವವರು ಹಲ್ಲೆ ಮಾಡಿರುವ ಬಗ್ಗೆ ತಿಳಿಸಿರುತ್ತೇನೆ ಮತ್ತು ನಮ್ಮ ತೋಟದಲ್ಲಿ ಹಲ್ಲೆಯಾಗಿರುವ ಬಗ್ಗೆಯೂ ತಿಳಿಸಿರುತ್ತೇನೆ. ಆ ದಿನ ಆಸ್ಪತ್ರೆಗೆ ನಾನು ಮತ್ತು ಚಾಸಾ-2 ರವರು ಹೋಗಿರುತ್ತೇವೆ. ಆ ದಿನ ಯಾವುದೇ ಪೋಲಿಸ್ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ. ನಾನು ಮ.12.00 ರ ಸಮಯಕ್ಕೆ ಆಸ್ಪತ್ರೆಯಿಂದ ಹಿಂತಿರುಗಿರುತ್ತೇನೆ. ಆಸ್ಪತ್ರೆಯಿಂದ ನಾವು ಮ.1.00 ರ ಸಮಯಕ್ಕೆ ಮನಗೆ ಹಿಂತಿರುಗಿರುತ್ತೇನೆ. ನಂತರ ಮನೆಯಿಂದ ಮ.3.00 ರ ಸಮಯಕ್ಕೆ ಠಾಣೆಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ದೂರು ನೀಡುವಂತೆ ನಮಗೆ ವೈಧ್ಯಾಧಿಕಾರಿಗಳು ತಿಳಿಸಿರುವುದಿಲ್ಲ. ನಾನು ಮನೆಯಲ್ಲಿ ದೂರನ್ನು ಬರವಣಿಗೆ ಮಾಡಿಕೊಂಡು ತೆಗೆದುಕೊಂಡು ಹೋಗಿರುತ್ತೇನೆ ನಂತರ ಅದನ್ನು ಪೋಲಿಸರು ಟೈಪ್ ಮಾಡಿಕೊಂಡಿರುತ್ತಾರೆ. ಸದರಿ ದೂರನ್ನು ಪೋಲಿಸರು ಠಾಣೆಯಿಂದ ಹೊರಗೆ ಟೈಪ್ ಮಾಡಿಸಿರುತ್ತಾರೆ. ನಾನು ನನ್ನ ದೂರಿನಲ್ಲಿ ಘಟನೆ ನಡೆದ ಸ.ನಂ. ಬಗ್ಗೆ ತಿಳಿಸಿರುತ್ತೇನೆ.

ನನ್ನ ದೂರಿನಲ್ಲಿ ಘಟನೆ ನಡೆದ ಸ್ಥಳದ ಬಗ್ಗೆಯೂ ವಿವರಿಸಿರುತ್ತೇನೆ. ಸದರಿ ದೂರನ್ನು ನಾನು ಓದಿ ನೋಡಿರುತ್ತೇನೆ. ಘಟನೆಯಲ್ಲಿ ನನ್ನ ಮೊಬೈಲ್ ಒಡೆದುಹೋಗಿರುತ್ತದೆ. ಈಗ ಅದು ನನ್ನ ಬಳಿ ಇಲ್ಲ. ಸದರಿ ಮೊಬೈಲ್ ಎಲ್ಲಿ ಕಳೆದು ಹೋಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಅದು Android Mobile ಆಗಿರುತ್ತದೆ. ಸದರಿ ಮೊಬೈಲ್ ನಲ್ಲಿ ಇದ್ದ ಸಿಮ್ ಕಾರ್ಡ್ ನ ನಕಲಿಯನ್ನು ಪಡೆದಿರುತ್ತೇನೆ. ಸದರಿ ನಕಲಿಯ ಸಿಮ್ ನ್ನು ಪಡೆಯುವಾಗಿ ತೋಟದಲ್ಲಿ ಗಲಾಟೆಯಾದ ಬಗ್ಗೆ ದೂರು ನೀಡಿ ಪಡೆದಿರುತ್ತೇನೆ. ಸದರಿ ದೂರಿನಲ್ಲಿ ಘಟನೆಯಲ್ಲಿ ನನ್ನ ಮೊಬೈಲ್ ಒಡೆದು ಹೋಗಿರುವ ಬಗ್ಗೆ ತಿಳಿಸಿರುತ್ತೇನೆ. ದೂರನ್ನು ಟೈಪ್ ಮಾಡುವ ಸಂದರ್ಭದಲ್ಲಿ ಘಟನೆ ನಡದೆ ಸ.ನಂ. ನ ವಿಸ್ತೀರ್ಣ ಮತ್ತು ಮೊಬೈಲ್ ಕಳುವಾಗಿರುವ ಬಗ್ಗೆ ತಿಳಿಸಿರುತ್ತೇನೆ. ನಾನು ನಮ್ಮ ತೋಟಕ್ಕೆ ಹೋಗುವಷ್ಟರಲ್ಲಿ ಆರೋಪಿಗಳು 7-8 ಗಿಡಗಳ ಕಾಫೀಯನ್ನು ಕೊಯ್ಲು ಮಾಡಿರುತ್ತಾರೆ. ಸದರಿ ಕಾಫೀ ಬೀಜಗಳನ್ನು ಟಾರ್ಪಲ್ ಮೇಲೆ ಹಾಕಿರುತ್ತಾರೆ. ಕಾಫೀ ಕುಯ್ದು ಟಾರ್ಪಲ್ ನ ಮೇಲೆ ಹಾಕಿರುವ ಬಗ್ಗೆ ನಾನು ಪೋಲಿಸರಿಗೆ ಮಾಹಿತಿಯನ್ನು ನೀಡಿರುವುದಿಲ್ಲ.

ಅದನ್ನು ಪೋಲಿಸರಿಗೆ ತಿಳಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ದೂರನ್ನು ದಾಖಲಿಸಿದ ನಂತರ ಮತ್ತು ಮಹಜರ್ ಪೂರ್ವದಲ್ಲಿ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ.

ಮಹಜರ್ ಕ್ರಮ ಜರುಗಿಸುವ ಪೂರ್ವದಲ್ಲಿ ಕತ್ತಿ ಮತ್ತು ದೊಣ್ಣೆಯನ್ನು ತೆಗೆದುಕೊಂಡು ಬರುವಂತೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ. ನಾನು ಘಟನೆ ನಡೆದ ನಂತರ ಕಾಫೀ ಬೀಜ, ಮೊಬೈಲ್, ಕತ್ತಿ ಮತ್ತು ದೊಣ್ಣೆಯನ್ನು ಯಾರು ತೆಗೆದುಕೊಂಡು ಹೋಗಿರುತ್ತಾರೆ ಎಂಬುದರ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನಿಪಿ-4 ರಲ್ಲಿ ಯಾವುದೇ ಕತ್ತಿ ಮತ್ತು ದೊಣ್ಣೆ ಕಂಡುಬರುತ್ತಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪೋಲಿಸರು ಒಟ್ಟಿಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನನ್ನ ಸಮಕ್ಷಮ ಕತ್ತಿ ಮತ್ತು ದೊಣ್ಣೆಗೆ ಪೋಲಿಸರು ಚೀಟಿಯನ್ನು ಅಂಟಿಸಿರುತ್ತಾರೆ. ಆದರೆ ನ್ಯಾಯಾಲಯದ ಮುಂದಿರುವ ಎಂ.ಒ.1 ಮತ್ತು 2 ರ ಮೇಲೆ ಯಾವುದೇ ಚೀಟಿ ಕಂಡುಬರುತ್ತಿಲ್ಲ ಎಂದರೆ ಸರಿ. ದೊಣ್ಣೆಯ ಜಾತಿಯ ಬಗ್ಗೆ ತಿಳಿಸಿರುವುದಿಲ್ಲ. ನಾನು ಮುದ್ದೆಮಾಲುಗಳನ್ನು ಪೋಲಿಸರಿಗೆ ನೀಡುತ್ತಿರುವ ಕುರಿತು ಯಾವುದೇ ಫೋಟೋವನ್ನು ತೆಗೆಯಲಾಗಿರುವುದಿಲ್ಲ. ನಾನು ಠಾಣೆಗೆ ಮೊಬೈಲ್ ಬಿಲ್ಲನ್ನು ನೀಡುವ ಸಲುವಾಗಿ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಮೊಬೈಲ್ ಬಿಲ್ ನ್ನು ಪಡೆಯುವ ಸಂದರ್ಭದಲ್ಲಿ ಪೋಲಿಸರು ನನ್ನ ಬಳಿ 2 ಸಹಿಯನ್ನು ಪಡೆದುಕೊಂಡಿರುತ್ತಾರೆ ಮತ್ತು ಸದರಿ ಸಮಯದಲ್ಲಿ ಏನನ್ನು ಬರೆಯಲಾಗಿದೆ ಎಂದು ಓದಿ ನೋಡಿರುತ್ತೇನೆ.

ನಿಪಿ-3 ಕ್ಕೆ ನಾನು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿ. ಲತಾಮಣಿ ಎಂಬುವವರು, ಚಾಸಾ-2, ಅಶೋಕ್, ರಜಿತ್, ಇಂದ್ರೇಶ್ ಮತ್ತು ನನ್ನ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸದರಿ ದೂರು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ. ಪುಟ್ಟಸ್ವಾಮಿ ಗೌಡ ಎಂಬುವವರು ನನ್ನ ತಂದೆ ಮತ್ತು ಇತರರ ವಿರುದ್ಧ ಅಸಲು ದಾವಾ ಸಂಖ್ಯೆ 47/2021 ರಡಿಯಲ್ಲಿ ಒಂದು ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಮ್ಮ ತಂದೆಯ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಹೊರಡಿಸಲಾಗಿತ್ತು ಎಂದರೆ ಸರಿ. ಆದ ಕಾರಣ 1 ಮತ್ತು 2 ನೇ ಆರೋಪಿಗಳು ಪುಟ್ಟಸ್ವಾಮಿ ಗೌಡ ರವರಿಗೆ ಸಹಾಯ ಮಾಡುತ್ತಾರೆಂದು ತಿಳಿದು ನನ್ನ ತಂದೆಯ ಮಾತಿನ ಮೇರೆಗೆ ಪ್ರಸ್ತುತ ಪ್ರಕರಣವನ್ನು ಅವರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿ.16.12.2022 ರಂದು ಆರೋಪಿಗಳು ಯಾವುದೇ ಹಲ್ಲೆ, ಕೊಲೆ ಬೆದರಿಕೆ, ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿರುವುದಿಲ್ಲ ಮತ್ತು ನನ್ನ ಮೊಬೈಲ್ ನ್ನು ಹೊಡೆದು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಂತೆ ಮಹಜರ್ ಕ್ರಮವನ್ನು ಜರುಗಿಸಿ ಯಾವುದೇ ಮುದ್ದೆ ಮಾಲುಗಳನ್ನು ಪೋಲಿಸರು ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅದರ ಬಾಬ್ತು ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಮುದ್ದೆ ಮಾಲು ಮತ್ತು ಫೋಟೋಗಳನ್ನು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ನೀಡುವ ಸಲುವಾಗಿ ಸಿವಿಲ್ ವ್ಯಾಜ್ಯ ಇರುವ ಬಗ್ಗೆ ಮತ್ತು ಸ.ನಂ. ಗಳ ಬಗ್ಗೆ ಮಾಹಿತಿಯನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.